KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**
**S.C (SESSION CASES)/2/2021**

Complainant(PROSECUTION):
State by Jayapura Police, Rept. by The Public Prosecutor, Chikkamagaluru.

**VERSUS**

Accused:
Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.

---------------------------------------------------------------------------

State Complainant}: The Public Prosecutor, Chikkamagaluru.,
Advocate for I.S. THEJASVI appearing for Sreeraj @ Annaiah

---------------------------------------------------------------------------

**Offence punishable under : SEC.314. of INDIAN PENAL CODE,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**S.C. No: 2/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಧರ್ಮರಾಜ್ | ಪ್ರಾ.ಸಾ.- 11 |
| ತಂದೆ ಹೆಸರು | : | ಆಂಜನೇಯ | ಚಾ.ಸಾ.- 20 |
| ವಯಸ್ಸು | : | 39 ವರ್ಷ | |
| ಉದ್ಯೋಗ | : | ಪಿಸಿ ನಂ. 670, ಬಾಳಹೊನ್ನೂರು ಪೊಲೀಸ್ ಠಾಣೆ | |
| ವಾಸ ಸ್ಥಳ | : | ಬಾಳೆಹೊನ್ನೂರು | |

**ದಿನಾಂಕ: 10-11-2025**

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀಮತಿ ವೀಣಾ -ಪಿ.ಪಿ.ಯವರಿಂದಃ**

1. 2018 ರಿಂದ 2024 ರವರೆಗೆ ನಾನು ಜಯಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 20-02-2019 ರಂದು ಈ ಪ್ರಕರಣದಲ್ಲಿ ಚಾಸಾ-22- ತನಿಖಾಧಿಕಾರಿಯು ನನ್ನನ್ನು ಮಹಜರಿಗೆಂದು ಮಠದ ಗದ್ದೆ ಹೆದ್ಸೆ ಗ್ರಾಮದ ಈ ಪ್ರಕರಣದ ಮೃತೆ ನಾಗರತ್ನರವರ ಮನೆಗೆ ಕರೆದುಕೊಂಡು ಹೋದರು. ತನಿಖಾಧಿಕಾರಿಯು ಸದರಿ ಸ್ಥಳದಲ್ಲಿ ಸ್ಥಳ ಮಹಜರ್ ಮಾಡಿದ್ದು, ಸ್ಥಳ ಮಹಜರ್ ಮಾಡುವ ಸಂದರ್ಭದಲ್ಲಿ ಫೋಟೋ ತೆಗೆಯುವಂತೆ ನನಗೆ ನಿರ್ದೇಶಿಸಿದ್ದು, ಅದರಂತೆ ನಾನು ನಿ.ಪಿ.9 ರಂತೆ ಫೋಟೋ ತೆಗೆದಿರುತ್ತೇನೆ.

3. ಠಾಣೆಗೆ ವಾಪಾಸು ಬಂದ ನಂತರ ಮಹಜರ್ ಸಮಯದಲ್ಲಿ ತೆಗೆದ ಫೋಟೋವನ್ನು ಕಂಪ್ಯೂಟರ್ ಗೆ ಡಾಟಾ ಕೇಬಲ್ ಮೂಲಕ ವರ್ಗಾವಣೆ ಮಾಡಿ ಸಿಡಿಗೆ ಟ್ರಾನ್ಸ್ ಫರ್ ಮಾಡಿದೆನು. ಆ ಬಗ್ಗೆ ನಾನು ಸಾಕ್ಷ್ಯ ಅಧಿನಿಯಮ ಕಲಂ.65(ಬಿ) ಅಡಿಯಲ್ಲಿ ಸರ್ಟಿಫಿಕೇಟನ್ನು ಕೊಟ್ಟಿದ್ದು, ಸದರಿ ಸರ್ಟಿಫಿಕೇಟನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ. 27 ಎಂದು ಗುರುತಿಸಲಾಯಿತು. ಸದರಿ ದೃಢೀಕರಣ ಪತ್ರವನ್ನು ಚಾಸಾ-23 ರವರಿಗೆ ಕೊಟ್ಟಿರುತ್ತೇನೆ.

4. ಸದರಿ ಸಿಡಿಯನ್ನು ನ್ಯಾಯಾಲಯದಲ್ಲಿ play ಮಾಡಿ ನೋಡಲಾಗಿ, ಸದರಿ ಸಿಡಿಯಲ್ಲಿ ನಿ.ಪಿ.2 ಎಂದು ಗುರುತಿಸಲಾದ ಶವ ಪರೀಕ್ಷಾ ಕಾಲದಲ್ಲಿ ತೆಗೆದ ಫೋಟೋ ಮತ್ತು ನಿ.ಪಿ.9 ಎಂದು ಗುರುತಿಸಲಾದ ಮಹಜರ್ ಕಾಲದಲ್ಲಿ ತೆಗೆದ ಫೋಟೋ ಕಂಡು ಬರುತ್ತಿದ್ದು, ಸದರಿ ಫೋಟೋವನ್ನು ನಿ.ಪಿ.28 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರಃಶ್ರೀ ಐ ಎಸ್ ಟಿ ವಕೀಲರಿಂದಃ**

5. ಮೇಲ್ಕಂಡ ಸ್ಥಳಕ್ಕೆ ಹೋದ ಬಾಬ್ತು ಮಹಜರ್ ನಲ್ಲಿ ನಾನು ಸಹಿ ಮಾಡಿರುವುದಿಲ್ಲ. ನಿ.ಪಿ.27 ಎಂದು ಗುರುತಿಸಲಾದ ಪ್ರಾಮಾಣ ಪತ್ರದಲ್ಲಿ ಕ್ಯಾಮರಾದ ಬಗ್ಗೆ, ಅದರಲ್ಲಿರುವ

storage ಸಾಮರ್ಥ್ಯದ ಬಗ್ಗೆ, ಸದರಿ ಕ್ಯಾಮರಾದ ದಾಖಲಾತಿಗಳ ಬಗ್ಗೆ ಯಾವುದೇ ವಿವರಣೆ ಕೊಟ್ಟಿಲ್ಲ ಎಂದರೆ ಸರಿ. ಸಿಡಿಗೆ ವರ್ಗಾಯಿಸುವಾಗ ಯಾವ software ಬಳಸಿದ್ದೇನೆ ಎಂದು ಮಾಹಿತಿ ಇಲ್ಲ ಎಂದರೆ ಸರಿ.

6. ತನಿಖಾಧಿಕಾರಿಗೆ ಸಿಡಿಯನ್ನು ಯಾವತ್ತು ಕೊಟ್ಟಿದ್ದೇನೆ ಎಂದು ಹೇಳಲು ಆಗುವುದಿಲ್ಲ. ಸಿಡಿಯ specification ನ್ನು ನಿ.ಪಿ.27 ರಲ್ಲಿ ಹೇಳಿಲ್ಲ ಎಂದರೆ ಸರಿ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ನಿ.ಪಿ.2 ಎಂದು ಗುರುತಿಸಲಾದ ಫೋಟೋ ನನಗೆ ಯಾರು, ಯಾವ ರೂಪದಲ್ಲಿ ಎಲ್ಲಿಂದ ತಂದು ಕೊಟ್ಟರು ಎನ್ನುವ ಬಗ್ಗೆ ನಿ.ಪಿ. 27 ರ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ.

ಮರು ವಿಚಾರಣೆ: ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-10-11-2025

(ರಾಜೇಶ್ವರಿ ಎನ್ ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿ ಸಹಿ:-

Visit **ecourts.gov.in** for updates or download mobile app "**eCourts Services**" from Android or iOS